**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.**

**ದಿಃ15-04-2026**

**ಪಾಟೀ ಸವಾಲುಃ ದೂರುದಾರರ ಪರ ಶ್ರೀಮತಿ ಎಸ್ ಕೆ ವಕೀಲರಿಂದಃ**

ನಾನು ಪಿ ಯು ಸಿ , ಟಿ ಸಿ ಹೆಚ್ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 4 ವರ್ಷಗಳಿಂದ ರಾಯಚೂರಿನ ಮಾನ್ವಿ ತಾಲ್ಲೂಕಿನಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ಅದಕ್ಕೂ ಮೊದಲು ಸಕಲೇಶಪುರ ತಾಲೂಕು ಇಬ್ಬಡಿ ಸುಳ್ಳಕ್ಕಿ ಸರ್ಕಾರಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದೆ. ನನಗೆ ದೂರುದಾರರ ಪರಿಚಯವಿರುವುದಿಲ್ಲ. ಮೋಹನ್ ರವರು 10 ವರ್ಷದಿಂದ ಪರಿಚಯವಿರುತ್ತಾರೆ. ನಾನು ಸಕಲೇಶಪುರದಲ್ಲಿ ಕೆಲಸ ಮಾಡುತ್ತಿದ್ದಾಗ 2018 ರಿಂದ ರಲ್ಲಿ ಹೆಚ್ ಡಿ ಸಿ ಸಿ ಬ್ಯಾಂಕ್ ಗೆ ನನ್ನ ಸಂಬಳ ಜಮಾ ಆಗುತ್ತಿತ್ತು. ನಾನು 28 ವರ್ಷಗಳಿಂದಲೂ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ. 2010 ರಿಂದ 2022 ರವರೆಗೆ ನಾನು ಸಕಲೇಶಪುರದಲ್ಲಿ ಸೇವೆ ಸಲ್ಲಿಸಿರುತ್ತೇನೆ. ಹೆಚ್ ಡಿ ಸಿ ಸಿ ಬ್ಯಾಂಕ್ ನ ಮೊದಲು ನಾನು ಸಿಂಡಿಕೇಟ್ ಬ್ಯಾಂಕ್ ಖಾತೆಗೆ ಸಂಬಳ ಜಮಾ ಆಗುತ್ತಿತ್ತು. ಸಿಂಡಿಕೇಟ್ ಬ್ಯಾಂಕ್ ಈಗ ಕೆನರಾ ಬ್ಯಾಂಕ್ ಜೊತೆ ವಿಲೀನವಾಗಿರುತ್ತದೆ ಎಂದರೆ ಸರಿ.

ದೂರುದಾರರು ಸಿಂಡಿಕೇಟ ಬ್ಯಾಂಕ್ ನಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಕೆನರಾ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸಿಂಡಿಕೇಟ್ ಬ್ಯಾಂಕ್ ಕೆನರಾ ಬ್ಯಾಂಕ್ ಜೊತೆ ವಿಲೀನವಾಗಿದ್ದರಿಂದ ಅವರು ಕೆನರಾ ಬ್ಯಾಂಕ್ ನಲ್ಲಿ ಕೆಲಸ ಮುಂದುವರಿಸಿರುತ್ತಾರೆಂದರೆ ಸಾಕ್ಷಿ ದೂರುದಾರರು ಕೆನರಾ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. 2019 ರಲ್ಲಿ ಅಕ್ಟೋಬರ್ ನಲ್ಲಿ ಮೋಹನ ರವರ ಬಳಿ ಸಾಲ ಕೇಳಿದಾಗ ಅವರು ದೂರುದಾರರ ಬಳಿ ಕರೆದುಕೊಂಡು ಹೋಗಿರುತ್ತಾರೆ. ಈ ಪ್ರಕರಣ ದಾಖಲಾಗುವ ಮೊದಲು ಸಾಲ ಕೇಳಿರುತ್ತೇನೆ. ದೂರುದಾರರ ಬಳಿ ಸಾಲ ಪಡೆದಿರುತ್ತೇನೆ ಎಂದರೆ ಸಾಕ್ಷಿ 2019 ರಲ್ಲಿ 50 ಸಾವಿರ ಮತ್ತು 2020ರ ಜನವರಿಯಲ್ಲಿ 50 ಸಾವಿರ ಸಾಲ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣ ದಾಖಲು ಮಾಡುವ ಮೊದಲೇ ಅವರ ಪರಿಚಯವಿರುತ್ತದೆ ಎಂದರೆ ಸರಿ.

ನಾನು ದೂರುದಾರರ ಬಳಿ ಸಾಕಷ್ಟು ಬಾರಿ ಸಾಲ ಪಡೆದು ಹಿಂದಿರುಗಿಸುತ್ತಿದ್ದೆ ಎಂದರೆ ಸರಿಯಲ್ಲ. ಮೋಹನ್ ರವರು ನನ್ನನ್ನು ದೂರುದಾರರ ಮನೆಯ ಬಳಿ ಕರೆದುಕೊಂಡು ಹೋಗಿರುತ್ತಾರೆ. ಈ ಪ್ರಕರಣದಲ್ಲಿ ಮೋಹನ ರವರ ಸಾಕ್ಷ್ಯ ನುಡಿಸಲು ತೊಂದರೆ ಇರುವುದಿಲ್ಲ. ನಾನು ಸಕಲೇಶಪುರದಲ್ಲಿ ಕೆಲಸ ಮಾಡುವಾಗ ಸಾಕಷ್ಟು ಜನರ ಬಳಿ ಸಾಲ

ಮಾಡಿರುತ್ತೇನೆಂದರೆ ಸಾಕ್ಷಿ ಸಾಲ ಪಡೆದಿದ್ದು ಅದನ್ನು ವಾಪಸ್ಸು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಲ ಹಿಂದಿರುಗಿಸುವ ಕಾಲಕ್ಕೆ ನಾನು ಅವರಿಂದ ಚೆಕ್ ವಾಪಸ್ಸು ಪಡೆಯುತ್ತಿದ್ದೆ ಎಂದರೆ ಸರಿ. ಹಾಗಾಗಿ ಸಾಲ ಹಿಂದಿರುಗಿಸಿದ ನಂತರ ಚೆಕ್ ನ್ನು ವಾಪಸ್ಸು ಪಡೆಯಬೇಕೆಂಬ ಜ್ಞಾನ ನನಗೆ ಇದೆ ಎಂದರೆ ಸರಿ. ಅದೇ ರೀತಿ ಒಂದು ವೇಳೆ ದೂರುದಾರರಿಗೆ ಸಾಲ ಮರುಪಾವತಿ ಮಾಡಿದ್ದರೆ ನಾನು ಚೆಕ್ ವಾಪಸ್ಸು ಪಡೆಯುತ್ತಿದೆ ಆದರೆ ಯಾವುದೇ ಸಾಲ ಮರುಪಾವತಿ ಮಾಡದೇ ಇರುವ ಕಾರಣ ನಾನು ಚೆಕ್ ನ್ನು ವಾಪಸ್ಸು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ದೂರುದಾರರಿಗೆ ಮೋಹನ್ ರವರ ಮೂಲಕ 2020 ನವೆಂಬರ್ ನಲ್ಲಿ 50 ಸಾವಿರ, 2021 ಜನವರಿಯಲ್ಲಿ 50 ಸಾವಿರ ಸಾಲ ಮರುಪಾವತಿ ಮಾಡಿ, ನನ್ನ ಕೆನರಾ ಬ್ಯಾಂಕ್ ಚೆಕ್ ನ್ನು ವಾಪಸ್ಸು ನೀಡಿದ್ದು, ಹೆಚ್ ಡಿ ಸಿ ಸಿ ಬ್ಯಾಂಕ್ ಖಾತೆಯ ಚೆಕ್ ನ್ನು ವಾಪಸ್ಸು ನೀಡಿಲ್ಲ ಎಂದು ನುಡಿಯುತ್ತಾರೆ.

ನನಗೆ ಕೆನರಾ ಬ್ಯಾಂಕ್ ನಲ್ಲಿ ಖಾತೆ ಇದ್ದ ಕಾಲಕ್ಕೆ ಮತ್ತು ಅಲ್ಲಿ ಸಂಬಳ ಪಡೆಯುತ್ತಿದ್ದ ಕಾಲಕ್ಕೆ ದೂರುದಾರರಿಂದ ಸಾಲ ಪಡೆದಿದ್ದಕ್ಕೆ ಕೆನರಾ ಬ್ಯಾಂಕ್ ಚೆಕ್ ನೀಡಿದ್ದೆ ಎಂದರೆ ಸರಿ. ಆನಂತರ ನನ್ನ ಸಂಬಳ ಖಾತೆ ಹೆಚ್ ಡಿ ಸಿ ಸಿ ಬ್ಯಾಂಕ್ ಗೆ ವರ್ಗಾಯಿಸಿದ್ದರಿಂದ ಕೆನರಾ ಬ್ಯಾಂಕ್ ಚೆಕ್ ನ್ನು ವಾಪಸ್ಸು ಪಡೆದು ಹೆಚ್ ಡಿ ಸಿ ಸಿ ಬ್ಯಾಂಕ್ ಖಾತೆ ಚೆಕ್ ನ್ನು ದೂರುದಾರರಿಗೆ ನೀಡಿರುತ್ತೇನೆಂದರೆ ಸರಿಯಲ್ಲ. ನಾನು ದೂರುದಾರರಿಗೆ ಸಾಲ ವಾಪಸ್ಸು ಮಾಡಿರುವ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ಆದರೆ ಸಾಕ್ಷಿದಾರರನ್ನು ವಿಚಾರಣೆ ಮಾಡಿಸುತ್ತೇನೆ. ನಿ ಪಿ 1 ಚೆಕ್ ನನ್ನದೇ ಆಗಿರುತ್ತದೆ ಎಂದರೆ ಸರಿ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಆದರೆ ಬರವಣಿಗೆ ನನ್ನದ್ದಲ್ಲ. ಈ ಪ್ರಕರಣ ದಾಖಲು ಮಾಡುವ ಮೊದಲು ದೂರುದಾರರು ನನಗೆ ನೋಟೀಸ ಕಳುಹಿಸಿದ್ದರು ಎಂದರೆ ಸರಿ. ನಾನು ನೋಟೀಸ ನ್ನು ಪಡೆದು ನಿ ಪಿ 5 ಕ್ಕೆ ಸಹಿ ಮಾಡಿರುತ್ತೇನೆಂದರೆ ಸರಿ. ನಾನು ಹಣ ವಾಪಸ್ಸು ನೀಡಿರುವ ಬಗ್ಗೆ ಉತ್ತರ ನೋಟೀಸ ಕಳುಹಿಸಿರುತ್ತೇನೆ. ನಾನು ಯಾವುದೇ ಹಣ ಮರುಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**